# ಸುದ್ದಿಸಂಚಯ

## ನೆರೆ ಹಾವಳಿ ಪರಿಹಾರ




ವಡೋದರಾ ಕೇಂದ್ರದ ಮೂಲಕ ಪರಿಹಾರ ಕಾರ್ಯ

⇨ ಗುಜರಾತಿನ ರಾಜಕೋಟ್‌ನಲ್ಲಿರುವ ಶ್ರೀರಾಮಕೃಷ್ಣ ಆಶ್ರಮವು ನೆರೆ ಹಾವಳಿ ಪರಿಹಾರ ಕಾರ್ಯವನ್ನು ಬಹಳ ಪರಿಣಾಮಕಾರಿಯಾಗಿ ನಡೆಸುತ್ತಿದೆ. ಸೆಪ್ಟೆಂಬರ್ ತಿಂಗಳವರೆಗೆ ನಡೆದ ಮೊದಲ ಹಂತದ ಕಾರ್ಯಕ್ರಮದಲ್ಲಿ ಸೂರತ್, ಖೇಡಾ ಹಾಗೂ ಆನಂದ್ ಜಿಲ್ಲೆಗಳ ೨೪ ಗ್ರಾಮಗಳಲ್ಲಿ ೪೮, ೭೫೦ ಕುಟುಂಬಗಳಿಗೆ ಆಹಾರ ಪದಾರ್ಥಗಳನ್ನು ನೀಡಲಾಯಿತು. ೧೧,೦೦೭ ಸಂತ್ರಸ್ತರಿಗೆ ಉಚಿತ ವೈದ್ಯಕೀಯ ತಪಾಸಣೆಯನ್ನೂ ಮಾಡಲಾಗಿದೆ. ೩, ೬೦೦ ಜನರಿಗೆ ಊಟ, ೪೫,೧೫೦ ಆಹಾರದ ಪೊಟ್ಟಣಗಳು, ೨೭,೫೪೪ ಕೆ.ಜಿ. ಅಕ್ಕಿ ಹಾಗೂ ಬೇಳೆ, ೩೪,೪೩೦ ಕೆ.ಜಿ. ಗೋಧಿಹಿಟ್ಟು, ೩,೪೪೩ ಕೆ.ಜಿ. ಅಡುಗೆ ತೈಲ, ೨,೦೬೪ ಕೆ.ಜಿ. ಮಸಾಲೆ ಪದಾರ್ಥಗಳು ೬,೮೮೬ ಕೆ.ಜಿ. ಸಕ್ಕರೆ ಹಾಗೂ ಉಪ್ಪು, ೬೮೮ ಕೆ.ಜಿ. ಚಹಾಪುಡಿ, ೨೫,೦೦೦ ನೀರಿನ ಪೊಟ್ಟಣಗಳು, ೨,೦೦೦ ಸ್ಟೀಲ್ ತಟ್ಟೆ, ಬಟ್ಟಲು ಮತ್ತು ಲೋಟಗಳನ್ನು ವಿತರಿಸಲಾಗಿದೆ. ಇಷ್ಟೇ ಅಲ್ಲದೆ, ಸಾವಿರಾರು ಬಕೆಟ್ಟು, ಚೊಂಬು, ಬೆಡ್‌ಷೀಟ್‌ಗಳು, ಹೊದಿಕೆಗಳು, ಸೀರೆಗಳು, ಸಾಬೂನು, ಮೋಂಬತ್ತಿಗಳು ಹಾಗೂ ಬೆಂಕಿ ಪೊಟ್ಟಣ ಮುಂತಾದ ಅಗತ್ಯವಾದ ವಸ್ತುಗಳನ್ನೂ ವಿತರಿಸಲಾಗಿದೆ.

⇨ ವಡೋದರ ಜಿಲ್ಲೆಯ ೧೫ ಗ್ರಾಮಗಳ ೩೬,೬೮೫ ಸಂತ್ರಸ್ತರಿಗೆ ಆಹಾರ ಪದಾರ್ಥಗಳನ್ನು ವಿತರಿಸಲಾಗಿದೆ. ಮಹಾರಾಷ್ಟ್ರದ ಔರಂಗಾಬಾದ್ ಹಾಗೂ ನಾಂಡೇಡ್ ಜಿಲ್ಲೆಗಳಲ್ಲಿ ನಡೆಯುತ್ತಿರುವ ಪರಿಹಾರ ಕಾರ್ಯಕ್ರಮದಿಂದ ೧೧,೮೦೩ ಕುಟುಂಬಗಳಿಗೆ ಆಹಾರಪದಾರ್ಥಗಳು ಹಾಗೂ ಅಗತ್ಯ ವಸ್ತುಗಳನ್ನು ನೀಡಲಾಗಿದೆ. ಮುಂಬೈ ಕೇಂದ್ರವು ೭,೦೯೦ ಕುಟುಂಬಗಳಿಗೆ ನೆರವು ನೀಡಿದೆ ಹಾಗೂ ೨೦೦ ಸಂತ್ರಸ್ತರಿಗೆ ಉಚಿತ ವೈದ್ಯಕೀಯ ಸೇವೆಯನ್ನು ಸಲ್ಲಿಸಿದೆ.

⇨ ಒರಿಸ್ಸಾದ ಪುರಿ ಮಠ, ರಾಜಸ್ಥಾನದ ಜೈಪುರ ಕೇಂದ್ರಗಳ ಮೂಲಕವೂ ನೆರೆ ಹಾವಳಿ ಪೀಡಿತರಿಗೆ ಪರಿಹಾರ ಕಾರ್ಯವನ್ನು ನಡೆಸಲಾಗಿದೆ.



ರಾಜಮುಂಡ್ರಿ ಕೇಂದ್ರದ ಮೂಲಕ ಪರಿಹಾರ ಕಾರ್ಯ

⇨ ಆಂಧ್ರಪ್ರದೇಶದ ಪೂರ್ವ ಗೋದಾವರಿ ಜಿಲ್ಲೆಯ ಮುಮ್ಮಡಿವರಂನಲ್ಲಿ ನೆರೆಪೀಡಿತರಿಗೆ ಆಹಾರ ವಿತರಿಸುವ ಸೇವೆ ನಡೆದಿದೆ. ಮಹಾರಾಷ್ಟ್ರದ ನಾಂಡೇಡ್, ಬುಲ್ಡಾನಾ ಹಾಗೂ ಥಾಣೆ ಜಿಲ್ಲೆಗಳಲ್ಲಿ ಆಹಾರ ಪದಾರ್ಥಗಳನ್ನು ನೀಡಲಾಗಿದೆ. ಪುಣೆಯ ಪುಲೇವಾಡಿ ಪ್ರದೇಶದ ೧೦೦ ಕುಟುಂಬಗಳಿಗೆ ಆಹಾರ ಪದಾರ್ಥ ಹಾಗೂ ಕಂಬಳಿಗಳನ್ನು ನೀಡಲಾಗಿದೆ. ವೈದ್ಯಕೀಯ ಸೌಲಭ್ಯಗಳನ್ನು ನೀಡುವ ವ್ಯವಸ್ಥೆಯನ್ನು ಎಲ್ಲ ಕೇಂದ್ರಗಳಲ್ಲೂ ಪ್ರಾರಂಭಿಸಲಾಗಿದೆ. ✪

## ಒಂದು ಮನವಿ

ನೆರೆಪೀಡೆ ಪರಿಹಾರ ಕಾರ್ಯಗಳಿಗಾಗಿ ದೇಣಿಗೆ ನೀಡಬಯಸುವವರು The General Secretary, Ramakrishna Mission Headquarters, P.O. Belur Math, Dt. Howrah - 711202 ವಿಳಾಸಕ್ಕೆ ಚೆಕ್, ಎಂ.ಓ. ಅಥವಾ ಡಿ.ಡಿ.ಯ ಮೂಲಕ ಕಳುಹಿಸಬೇಕಾಗಿ ಕೋರಲಾಗಿದೆ. ಚೆಕ್ ಅಥವಾ ಡಿ.ಡಿ.ಯ ಮೇಲೆ Ramakrishna Mission ಎಂದು ನಮೂದಿಸಬೇಕು. ಈ ದೇಣಿಗೆಗಳಿಗೆ ವರಮಾನ ತೆರಿಗೆ 80-G ಕಾಯಿದೆಯಡಿ ತೆರಿಗೆ ವಿನಾಯತಿಯ ಸೌಲಭ್ಯವಿರುತ್ತದೆ.

⇨ ಆಂಧ್ರಪ್ರದೇಶದ ಕಡಪಾದಲ್ಲಿರುವ ರಾಮಕೃಷ್ಣ ಮಿಷನ್ ಕೇಂದ್ರವು ಮೂವತ್ತು ಜನ ಬಡ ವಿದ್ಯಾರ್ಥಿಗಳಿಗಾಗಿ ವಸತಿ ಸೌಲಭ್ಯವನ್ನು ಒದಗಿಸುವ ಯೋಜನೆಯನ್ನು ಹಮ್ಮಿಕೊಂಡಿದೆ. ಇದಕ್ಕೆ ಬೇಕಾಗುವ ಕಟ್ಟಡದ ಶಂಕುಸ್ಥಾಪನೆಯನ್ನು ವಿಶಾಖ ಪಟ್ಟಣದ ರಾಮಕೃಷ್ಣ ಮಿಷನ್ ಆಶ್ರಮದ ಅಧ್ಯಕ್ಷರಾದ ಸ್ವಾಮಿ ಅಮೃತಾನಂದಜಿ ಮಹಾರಾಜ್ ಜುಲೈ ೧೨. ೨೦೦೬ರಂದು ನೆರವೇರಿಸಿದರು. ಕಡಪಾ ನಗರದ ಮೇಯರ್ ಶ್ರೀ ರವೀಂದ್ರನಾಥ ರೆಡ್ಡಿಯವರು ಸಭೆಯ ಅಧ್ಯಕ್ಷತೆ ವಹಿಸಿದ್ದರು.


ಕಡಪಾದಲ್ಲಿ ವಿದ್ಯಾರ್ಥಿ ನಿಲಯದ ಉದ್ಘಾಟನೆ

⇨ ವಿವೇಕಾನಂದರ ಸ್ಫೂರ್ತಿಯಿಂದ ಯುವಜನ ಜಾಗೃತಿ ಮತ್ತು ಅಭಿವೃದ್ಧಿ—ವಿದ್ಯಾ ಎಂಬ ಸಂಚಾರಿ ಘಟಕವನ್ನು ಕಡಪಾದ ಕೇಂದ್ರವು ಜುಲೈ ೧೪, ೨೦೦೬ರಂದು ಪ್ರಾರಂಭಿಸಿತು. ದೃಶ್ಯ ಹಾಗೂ ಶ್ರವಣ ಮಾಧ್ಯಮಗಳು, ಸ್ವಾಮಿ ವಿವೇಕಾನಂದರ ಜೀವನ ಸಂದೇಶಗಳುಳ್ಳ ಚಿತ್ರಪ್ರದರ್ಶನ ಇತ್ಯಾದಿ ಸಾಮಗ್ರಿಗಳೊಂದಿಗೆ ಆಂಧ್ರಪ್ರದೇಶದ ಗ್ರಾಮಾಂತರ ಪ್ರದೇಶಗಳಲ್ಲಿ ಈ ವಾಹನವು ಸಂಚರಿಸುತ್ತದೆ. ಕಡಪಾದಿಂದ ೩೫ ಕಿ.ಮೀ. ದೂರವಿರುವ ಮಂಟಪಂಪಲ್ಲಿಯ ಪ್ರೌಢಶಾಲೆಯಲ್ಲಿ ಮೊದಲ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು.

⇨ ೧೩.೦೮.೨೦೦೬ರಂದು ಹೈದರಾಬಾದಿನಲ್ಲಿರುವ ರಾಮಕೃಷ್ಣ ಮಠದ ಆವರಣದಲ್ಲಿ 'ಪ್ರಕಾಶನ ಭವನ'ದ ಶಂಕು ಸ್ಥಾಪನೆಯನ್ನು ಹಿರಿಯ ಸಂನ್ಯಾಸಿಗಳಾದ ಪೂಜ್ಯ ಸ್ವಾಮಿ ಅನನ್ಯಾನಂದಜಿ ನೆರವೇರಿಸಿದರು. ತೆಲುಗು ಭಾಷೆಯಲ್ಲಿ ಪ್ರಕಟವಾಗುತ್ತಿರುವ ರಾಮಕೃಷ್ಣ ಮಠದ ಎಲ್ಲ ಆಧ್ಯಾತ್ಮಿಕ ಪುಸ್ತಕಗಳು ಹಾಗೂ 'ರಾಮಕೃಷ್ಣ ಪ್ರಭ' ಮಾಸಪತ್ರಿಕೆಯನ್ನು ಚೆನ್ನೈನಿಂದ ಹೈದರಾಬಾದಿಗೆ ವರ್ಗಾಯಿಸಲಾಗುವುದು.

⇨ ಕೊಲ್ಕತಾದಲ್ಲಿರುವ ರಾಮಕೃಷ್ಣ ಮಿಷನ್ ಸೇವಾ ಪ್ರತಿಷ್ಠಾನವು ೭೫ ವರ್ಷಗಳಿಂದ ಬಡಜನರಿಗೆ ವೈದ್ಯಕೀಯ ಸೇವೆಯನ್ನು ನೀಡುತ್ತಾ ಬಂದಿದೆ. ಜುಲೈ ೧೯೩೨ರಲ್ಲಿ ತಾಯಿ ಮತ್ತು ಮಕ್ಕಳ ಪಾಲನೆಗಾಗಿ ಪ್ರಾರಂಭವಾದ ಶಿಶುಮಂಗಲ್ ಪ್ರತಿಷ್ಠಾನ ಈಗ ಅತ್ಯಾಧುನಿಕ ವೈದ್ಯಕೀಯ ಸೌಲಭ್ಯಗಳನ್ನು ಹೊಂದಿದ್ದು, ಸಾವಿರಾರು ಜನರಿಗೆ ವೈದ್ಯಕೀಯ ಸೇವೆ ಸಲ್ಲಿಸುತ್ತಿದೆ. ಜುಲೈ ೨೨ರಂದು ಅದರ ಅಂಗಸಂಸ್ಥೆಯಾದ ವಿವೇಕಾನಂದ ವೈದ್ಯಕೀಯ ಶಾಸ್ತ್ರಗಳ ಸಂಸ್ಥೆಯು ಏರ್ಪಡಿಸಿದ್ದ ಇಪ್ಪತ್ತನೆಯ ವಾರ್ಷಿಕ ವಿಜ್ಞಾನ ಸಮಾವೇಶದಲ್ಲಿ ಪಶ್ಚಿಮ ಬಂಗಾಳ ವಿಶ್ವವಿದ್ಯಾನಿಲಯದ ಆರೋಗ್ಯ ಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ. ಸಿದ್ಧಾರ್ಥ ಮಜುಂದಾರ್ ಹಾಗೂ ಹಿರಿಯ ಸಾಧುಗಳಾದ ಶ್ರೀಮತ್ ಸ್ವಾಮಿ ಪ್ರಭಾನಂದಜಿ ಮಹಾರಾಜ್ ಮತ್ತು ಸ್ವಾಮಿ ಬ್ರಹ್ಮೇಶಾನಂದಜಿ ಮಹಾರಾಜ್ ಭಾಗವಹಿಸಿದ್ದರು.


ಸೇವಾ ಪ್ರತಿಷ್ಠಾನದ ಭವ್ಯ ಕಟ್ಟಡ

⇨ ಸ್ವಾಮಿ ವಿವೇಕಾನಂದರ ಜೀವನ ಸಂದೇಶಗಳನ್ನು ಕುರಿತು ವಿಶೇಷ ಅಧ್ಯಯನ, ಸಂಶೋಧನೆಗಳನ್ನು ನಡೆಸಿರುವ ವಿದ್ವಾಂಸರಿಗೆ ಕೊಲ್ಕತಾದ ರಾಮಕೃಷ್ಣ ಮಿಷನ್ ಇನ್‌ಸ್ಟಿಟ್ಯೂಟ್ ಆಫ್ ಕಲ್ಚರ್ **ವಿವೇಕಾನಂದ ಪುರಸ್ಕಾರ**ವನ್ನು ನೀಡುತ್ತಾ ಬಂದಿದೆ. ರಷ್ಯಾ ದೇಶದ ಡಾ. ವ್ಲಾಡಿಸ್ಲಾವ್ ಎಸ್.ಕೊಸ್ಟ್ಯುಷೆಂಕೊ (Dr.Vladislav S. Kostyuchenko) ಅವರಿಗೆ ಈ ಸಂಸ್ಥೆಯ ವತಿಯಿಂದ ಈ ವರ್ಷದ ಪುರಸ್ಕಾರವನ್ನು ನೀಡಿ ಗೌರವಿಸಲಾಗಿದೆ. ರಷ್ಯಾದಲ್ಲಿರುವ ಭಾರತದ ರಾಯಭಾರಿಗಳಾದ ಶ್ರೀ ಕನ್ವಲ್ ಸಿಬಾಲ್ ಅವರು ಮಾಸ್ಕೋ ನಗರದಲ್ಲಿರುವ ರಾಯಭಾರಿ ಕಛೇರಿಯಲ್ಲಿ ಆಗಸ್ಟ್ ೨ರಂದು ನಡೆದ ಸಮಾರಂಭವೊಂದರಲ್ಲಿ ಒಂದು ಲಕ್ಷ ರೂಪಾಯಿಗಳ ನಗದು, ಒಂದು ಗ್ರಂಥ ಹಾಗೂ ಸ್ವಾಮಿ ವಿವೇಕಾನಂದರ ಭಾವಚಿತ್ರವನ್ನು ಪುರಸ್ಕೃತರಿಗೆ ನೀಡಿದರು. ಅಲ್ಲಿನ ಅನೇಕ ಗಣ್ಯ ವ್ಯಕ್ತಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

⇨ ಚೆನ್ನೈನಲ್ಲಿರುವ ವಿವೇಕಾನಂದ ಕಾಲೇಜಿನ ಸಂಸ್ಕೃತ ವಿಭಾಗದ ಶಿಕ್ಷಕರಾದ ಡಾ.ಸಿ.ಎಸ್.ರಾಧಾಕೃಷ್ಣನ್‌ರವರು ಪ್ಯಾರಿಸ್ ನಗರದಲ್ಲಿರುವ ಅಂತಾರಾಷ್ಟ್ರೀಯ ಸಂಸ್ಕೃತ ಅಧ್ಯಯನ ಸಂಸ್ಥೆಯ ಸಲಹಾ ಸಮಿತಿಯ ಸದಸ್ಯರಾಗಿ ಆಯ್ಕೆಯಾಗಿದ್ದಾರೆ.

⇨ ಜುಲೈ ಹಾಗೂ ಆಗಸ್ಟ್ ತಿಂಗಳುಗಳ ಅವಧಿಯಲ್ಲಿ ಕರ್ನಾಟಕದ ಬೆಳಗಾವಿ, ಬೆಂಗಳೂರಿನಲ್ಲಿರುವ ಹಲಸೂರು, ಆಂಧ್ರಪ್ರದೇಶದ ವಿಶಾಖಪಟ್ಟಣಂ, ಗುಜರಾತಿನ ಲಿಂಬ್ಡಿ, ಉತ್ತರಪ್ರದೇಶದ ಲಕ್ನೌ–ಈ ಪ್ರದೇಶಗಳಲ್ಲಿರುವ ರಾಮಕೃಷ್ಣ ಮಿಷನ್ ಕೇಂದ್ರಗಳ ಮೂಲಕ ಕಣ್ಣಿನ ರೋಗಗಳ ಉಚಿತ ತಪಾಸಣೆಯನ್ನು ೩,೮೮೦ ರೋಗಿಗಳಿಗೆ ಮಾಡಲಾಯಿತು. ಇವರಲ್ಲಿ ೬೮೫ ರೋಗಿಗಳಿಗೆ ಉಚಿತ ಶಸ್ತ್ರಚಿಕಿತ್ಸೆಯನ್ನೂ ಮಾಡಲಾಯಿತು.